# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1246/2023

| ಸಿಡಬ್ಲ್ಯೂ | 8 | ಪಿಡಬ್ಲ್ಯೂ | 5 |
|---|---|---|---|

ಸಾಕ್ಷಿದಾರರ ಹೆಸರು : ಕುರುವತ್ತೆಪ್ಪ

ತಂದೆಯ ಹೆಸರು : ಚಂದ್ರಪ್ಪ

ವಯಸ್ಸು : 46 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 06.03.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಲೋಲೇಶ್ವರ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತನ ಪರಿಚಯ ಇರುತ್ತದೆ. ಆರೋಪಿಯು ನಮ್ಮ ಊರಿನವನು ಆಗಿರುತ್ತಾನೆ. ಈಗ್ಗೆ 2 ವರ್ಷದ ಹಿಂದೆ ನಾನು ಹೊಲದ ಕೆಲಸಕ್ಕೆ ಹೋಗುತ್ತಿರುವಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಮಹಜರ ಆಗಿದ್ದು ಅದನ್ನು ಈಗಾಗಲೇ ನಿ ಪಿ 4 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 4(ಬಿ) ಎಂದು ಗುರುತಿಸಲಾಯಿತು. ನಿ ಪಿ 4 ರಲ್ಲಿ ಏನ ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಆ ದಿನ ಸ್ಥಳದಲ್ಲಿ ಪೋಲೀಸರು ಒಂದು ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಯಾವ ಒಬ್ಬ ವ್ಯಕ್ತಿಯು ಸಹ ಪೋಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 05.06.2023 ರಂದು ನಿಚ್ಚಾಪುರ ಗ್ರಾಮ ದಿಂದ ಓಬಳಾಪುರ ಗ್ರಾಮಕ್ಕೆ ಹೋಗುವ ಟಾರ್ ರಸ್ತೆ ಪಕ್ಕದಲ್ಲಿ ಇರುವ ಗಾಣಗೇರಿ ಪರಮೇಶಪ್ಪ ಮತ್ತು ಅಶ್ವಥಪ್ಪನವರ ಹೊಲಗಳ ಮಧ್ಯದಲ್ಲಿ ಇರುವ ಬಂಡಿ ಜಾಡಿನ ರಸ್ತೆಯಲ್ಲಿ ನನ್ನ ಮತ್ತು ಚಾ ಸಾ 7 ರವರ ಸಮಕ್ಷಮ ಆರೋಪಿ ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.05 ರಿಂದ 1.15 ರ ವರೆಗೆ ನಿ ಪಿ 4

ಆರೋಪಿ ತೋರಿಸಿದ ಕೃತ್ಯಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ ಪಿ 4 ರಲ್ಲಿ ಬರೆದಿರವ ಸಂಗತಿಗಳ ಬಗ್ಗೆ ಗೊತ್ತಿದ್ದರೂ ಮತ್ತು ಆ ಸಮಯದಲ್ಲಿ ನಾನು ಇರುವಂತಹ ಪೋಟೋವನ್ನು ತೆಗೆದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.**

ಮರು ವಿಚಾರಣೆ ಇಲ್ಲಾಃ-
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1246/2023

| | | | |
|---|---|---|---|
| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 6 |

ಸಾಕ್ಷಿದಾರರ ಹೆಸರು : ಕೊಟ್ರಯ್ಯ

ತಂದೆಯ ಹೆಸರು : ಲೇಟ್ ಮರುಗಯ್ಯ

ವಯಸ್ಸು : 62 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 06.03.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಹಗರಿಗಜಾಪುರ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತನ ಪರಿಚಯ ಇರುತ್ತದೆ. ಆರೋಪಿಯು ನಮ್ಮ ಊರಿನವನು ಆಗಿರುತ್ತಾನೆ. ಈಗ್ಗೆ 3 ವರ್ಷದ ಹಿಂದೆ ನಾನು ನನ್ನ ಹೊಲದ ಕೆಲಸಕ್ಕೆ ಹೋಗುತ್ತಿರುವಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ನಕಲಿ ಬಂಗಾರದ ಬಿಲ್ಲೆಯ ಜಪ್ತು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 3(ಸಿ) ಎಂದು ಗುರುತಿಸಲಾಯಿತು. ನಿ ಪಿ 3 ರಲ್ಲಿ ಏನ ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಆ ದಿನ ಸ್ಥಳದಲ್ಲಿ ಪೋಲೀಸರು ಒಂದು ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲಾ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**<u>ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>**

ದಿನಾಂಕ 03.05.2023 ರಂದು ಚಿಗಟೇರಿ ಪೋಲೀಸ ಠಾಣೆ ಯಲ್ಲಿ ನನ್ನ ಮತ್ತು ಚಾ ಸಾ 3 ರವರ ಸಮಕ್ಷಮ ಚಾ ಸಾ 18 ರವರು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ನಕಲಿ ಬಂಗಾರದ ಬಿಲ್ಲೆಗಳ ಜಪ್ತು ಪಂಚನಾಮೆಯನ್ನು ನಿ ಪಿ 3 ರಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ 500 ರಿಂದ 550 ನಲಿ ಬಂಗಾರದ ಬಿಲ್ಲೆಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲಾ. ನಿ ಪಿ 3 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎನ್ ವಕೀಲರಿಂದಃ- ಇಲ್ಲ</u>**

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1246/2023

| ಸಿಡಬ್ಲ್ಯೂ | 6 | ಪಿಡಬ್ಲ್ಯೂ | 7 |
|---|---|---|---|

ಸಾಕ್ಷಿದಾರರ ಹೆಸರು : ರಮೇಶ
ತಂದೆಯ ಹೆಸರು : ಮರಿಯಪ್ಪ
ವಯಸ್ಸು : 33 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 06.03.2026
ಉದ್ಯೋಗ : ಕೂಲಿ
ವಾಸ ಸ್ಥಳ : ಹಗರಿಗಜಾಪುರ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತನ ಪರಿಚಯ ಇರುತ್ತದೆ. ಆರೋಪಿಯು ನಮ್ಮ ಊರಿನವನು ಆಗಿರುತ್ತಾನೆ. ಈಗ್ಗೆ 4-5 ವರ್ಷದ ಹಿಂದೆ ನಾನು ಕೂಲಿ ಕೆಲಸಕ್ಕೆ ಹೋಗುತ್ತಿರುವಾಗ ಪೋಲೀಸರು ನನ್ನನ್ನು ಕರೆದಿರುತ್ತಾರೆ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಹಣ ಜಪ್ತು ಮಹಜರ ಆಗಿದ್ದು ಅದನ್ನು ಈಗ ನಿ ಪಿ 5 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 5(ಬಿ) ಎಂದು ಗುರುತಿಸಲಾಯಿತು. ನಿ ಪಿ 5 ರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಆ ದಿನ ಸ್ಥಳದಲ್ಲಿ ಪೋಲೀಸರು ಮೂರು ಒಂದು ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕಾಗಿ ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇರುವುದಿಲ್ಲಾ.

**(ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 05.06.2023 ರಂದು ಹರಪನಹಳ್ಳಿ ತಾಲೂಕಿನ ಅಗ್ರಹಾರ ಗ್ರಾಮದ ಆರೋಪಿ ಭೋವಿ ಲಕ್ಕಪ್ಪನ ಮನೆಯಲ್ಲಿ ಆರೋಪಿತನು ಹಾಜರುಪಡಿಸಿದ ನಗದು ಹಣದ ಬಗ್ಗೆ ಪರಿಶೀಲಿಸಿ ಚಾ ಸಾ 19 ರವರು ನನ್ನ ಹಾಗೂ ಚಾ ಸಾ 5 ರವರ ಸಮಕ್ಷಮ ಬೆಳಿಗ್ಗೆ 9 ರಿಂದ 10.45 ಗಂಟೆಯವರೆಗೆ ನಿ ಪಿ 5 ರ ಹಣ ಜಪ್ತು ಪಂಚನಾಮೆಯನ್ನು ಜರೂಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 500 ರೂ ಮುಖ ಬೆಲೆಯ 1100 ನೋಟುಗಳನ್ನು ಒಟ್ಟು 5,50,000/- ರೂಗಳನ್ನು ಮತ್ತು ಒಂದು ಕಪ್ಪು ಬಣ್ಣದ ಸೈಡ್ ಸ್ಕೂಲ್ ಬ್ಯಾಗನ್ನು ಚಾ ಸಾ 19 ರವರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನ ಪರಿಚಯ ಇರುವುದರಿಂದ ನಿ ಪಿ 5 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.**

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.